ಶ್ರೀಮತಿ ಅನಸೂಯ ಗಜಾನನ ಶರ್ಮ.—ಅರ್ಧ ತಾಸಿನ ಚರ್ಚೆಗೆ ಅವಕಾಶ ಮಾಡಿಕೊಡಲಿರುವುದರಿಂದ ಒಂದೇ ಒಂದು ಪ್ರಶ್ನೆಯನ್ನು ಈಗ ಕೇಳುತ್ತೇನೆ. ಯಲ್ಲಾಪುರ ಮತ್ತು ಅಂಕೋಲ ತಾಲ್ಲೂಕುಗಳನ್ನು ಏಕೆ ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶಗಳು ಎಂದು ಸೇರಿಸಲಿಲ್ಲ ? ಕಾರವಾರ, ಸಿರಸಿ ಮತ್ತು ಹಳಿಯಾಳಗಳನ್ನು ಮಾತ್ರ ಸೇರಿಸಲಿಕ್ಕೆ ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಕೈಗಾರಿಕೆಗಳಲ್ಲಿ ಹಿಂದುಳಿದ ತಾಲ್ಲೂಕುಗಳು ಎಂದು ವಿಂಗಡಿಸಲಿಕ್ಕೆ ಕೆಲವು ಕ್ರೈಟೀರಿಯಾ ಹಾಕಿಕೊಂಡಿದ್ದೇವೆ. ಆ ಪ್ರಕಾರ, ಕಾರವಾರ, ಸಿರಸಿ ಮತ್ತು ಹಳಿಯಾಳಗಳನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ಪ್ರದೇಶಗಳೆಂದು ವಿಂಗಡಿಸಿದ್ದೇವೆ. ನಿಮ್ಮ ಪ್ರಕಾರ ಮಾಡಿದರೆ ಜಿಲ್ಲೆಯ ಎಲ್ಲ ತಾಲ್ಲೂಕುಗಳನ್ನೂ ಹಿಂದುಳಿದ ತಾಲ್ಲೂಕುಗಳೆಂದು ಮಾಡಬೇಕಾಗುತ್ತದೆ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ತಾವು ಅನುಸರಿಸುತ್ತಿರುವ ಕ್ರೈಟೀರಿಯಾ ಯಾವುದು ಎಂಬುದನ್ನು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕ್ರೈಟೀರಿಯಾ ವಿಚಾರದಲ್ಲಿ ಈ ಮನೆಯಲ್ಲಿ ಆಗಾಗ್ಗೆ ಸಾಕಷ್ಟು ಚರ್ಚೆಯಾಗಿದೆ. ಆ ಬಗ್ಗೆ ಪುನಃ ಹೇಳಬೇಕೆಂದರೆ ಮತ್ತು ಇನ್ನೇನಾದರೂ ಹೆಚ್ಚಿನ ಮಾಹಿತಿ ಬೇಕಾದರೆ ಮಾನ್ಯ ಸದಸ್ಯರು ನೋಟೀಸ್ ಕೊಡಲಿ. ಈ ಎಲ್ಲ ವಿವರಗಳನ್ನು ಒಂದೇ ಪ್ರಶ್ನೆ ಮೂಲಕ ಹೇಳಲಿಕ್ಕೆ ಬರುವುದಿಲ್ಲ ಮತ್ತು ಅವರು ಕೇಳುವುದಕ್ಕೂ ಆಗುವುದಿಲ್ಲ. ಬೇಕಾದರೆ ಕೈಗಾರಿಕಾ ಇಲಾಖಾ ಬೇಡಿಕೆಗಳಂ ಚರ್ಚೆಗೆ ಬಂದಾಗ ಮಾನ್ಯ ಸದಸ್ಯರು ಮಾತನಾಡಬಹುದು.

Handing over P.W.D. Roads in the Taluk Development Boards.

582 SRI K. RAMABHAT (Puttur)—Will the Minister for Rural Development and Panchayati Raj be pleased to state:—

(a) whether it is a fact that they have issued Government Order to transfer rural roads from the control of P.W.D. to the Taluk Development Boards;

(b) if so, reasons for such transfers,

(c) whether it is possible for the Taluk Development Boards which are financially week to maintain these roads?

SRI B. RAMAIAH (Minister for Rural Development and Panchayati Raj.—

(a) Yes.

(b) Rural roads have been transferred to Taluk Development Boards under rural development scheme to make the Taluk Development Boards and village panchayats to take part more effectively and to co-ordinate the implementation of the programmes.

(c) This matter is held over for re-examination.

ಶ್ರೀ ಕೆ. ರಾಮಭಟ್:—ಮಾನ್ಯ ಅಧ್ಯಕ್ಷರೇ, ಕೆಲವು ದಿವಸಗಳ ಹಿಂದೆ ಮಾನ್ಯ ಕಂದಾಯ ಮಂತ್ರಿಗಳು ಈ ಬಗ್ಗೆ ಉತ್ತರವನ್ನು ಕೊಟ್ಟಿರುವುದರಿಂದ ನಾನು ಬೇರೆ ಉಪಪ್ರಶ್ನೆಯನ್ನು ಕೇಳುವುದಿಲ್ಲ.